# ಭಾಷೆ ಏಕತೆಗೆ ಮಾರಕ ಆಗದಿರಲಿ

ನಮ್ಮ ದೇಶ ಬಹು ಭಾಷೆಗಳ ಮತ್ತು ಸಂಸ್ಕೃತಿಗಳ ಸಂಗಮ. 'ವೈವಿಧ್ಯತೆಯಲ್ಲಿಯೂ ಏಕತೆಯನ್ನು ಮೈಗೂಡಿಸಿಕೊಂಡ ಮಹಾನ್ ದೇಶ ನಮ್ಮದು' ಎಂದು ನಾವು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಆದರೆ ಇಂಥ ಮಾತುಗಳಿಗೆ ಈಗ ಅರ್ಥವಿಲ್ಲ. ಬಹು ಭಾಷೆಗಳೇ ಜನರ ನೆಮ್ಮದಿಯನ್ನು ಹಾಳು ಮಾಡುತ್ತಿವೆ. ಒಂದು ಭಾಷೆಯ ಜನರನ್ನು ಕಂಡರೆ ಇನ್ನೊಂದು ಭಾಷೆಯವರಿಗೆ ಆಗದು. ಯಾವುದೇ ಭಾಷೆಯ ಜನರು ದೇಶದ ಯಾವ ಭಾಗದಲ್ಲಾದರೂ ಜೀವಿಸಬಹುದು ಎಂಬ ಮೂಲಭೂತ ಹಕ್ಕಿಗೆ ಈಗ ಅರ್ಥವಿಲ್ಲ. ಸೋದರ ಭಾಷೆಗಳನ್ನೇ ಅಗೌರವಿಸುವ ಪ್ರಯತ್ನಗಳು ಕೆಲವು ರಾಜ್ಯಗಳಲ್ಲಿ ಆರಂಭವಾಗಿವೆ. ಉದ್ಯೋಗ ಮತ್ತಿತರ ಕಾರಣಗಳಿಗಾಗಿ ಬೇರೆ ರಾಜ್ಯಗಳಿಂದ ಬಂದವರನ್ನು ಶತ್ರುಗಳಂತೆ ಕಂಡು ಅವರನ್ನು ಹೊರಕ್ಕೆ ದಬ್ಬುವಂತಹ ಆಘಾತಕಾರಿ ಬೆಳವಣಿಗೆಗಳು ಕೆಲ ರಾಜ್ಯಗಳಲ್ಲಿ ನಡೆಯುತ್ತಿವೆ. ಸಾವಿರಾರು ವರ್ಷಗಳಿಂದ ನಾವು ರೂಢಿಸಿಕೊಂಡು ಬಂದ ಭಾಷಾ ಸಾಮರಸ್ಯಕ್ಕೆ ದೊಡ್ಡ ಪೆಟ್ಟುಬಿದ್ದಿದೆ.

ಕಳೆದ ವಾರ ಮಹಾರಾಷ್ಟ್ರ ವಿಧಾನಸಭೆಯಲ್ಲಿ ನಡೆದ ಅಹಿತಕರ ಘಟನೆಯನ್ನೇ ತೆಗೆದುಕೊಳ್ಳಿ. ಹಿಂದಿಯಲ್ಲಿ ಪ್ರಮಾಣ ವಚನ ಸ್ವೀಕರಿಸಲು ಮುಂದಾದ ಶಾಸಕರೊಬ್ಬರ ಮೇಲೆ ಮಹಾರಾಷ್ಟ್ರ ನವನಿರ್ಮಾಣ (ಎಂಎನ್‌ಎಸ್) ಸಮಿತಿಯ ಕೆಲ ಶಾಸಕರು ಹಲ್ಲೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿದರು. ಮಹಾರಾಷ್ಟ್ರ ವಿಧಾನಸಭೆಗೆ ಆಯ್ಕೆಯಾದವರೆಲ್ಲ ಮರಾಠಿಯಲ್ಲೇ ಪ್ರಮಾಣ ವಚನ ಸ್ವೀಕರಿಸಬೇಕು ಎಂಬುದು ಎಂಎನ್‌ಎಸ್ ಅಪೇಕ್ಷೆ. ಶಾಸಕರೊಬ್ಬರು ಹಿಂದಿಯಲ್ಲಿ ಪ್ರಮಾಣ ವಚನ ಸ್ವೀಕರಿಸಿದರೆ ಮರಾಠಿ ಭಾಷೆಗೆ ಅಗೌರವ ತೋರಿಸಿದಂತೇನಲ್ಲ. ಹಿಂದಿಯೂ ನಮ್ಮ ದೇಶದ ಭಾಷೆಯೇ. ಅದಕ್ಕೆ ರಾಷ್ಟ್ರಭಾಷೆ ಎಂಬ ಮನ್ನಣೆ ಇದೆ. ಮಹಾರಾಷ್ಟ್ರ ವಿಧಾನಸಭೆಯಲ್ಲಿ ಹಿಂದಿಯಲ್ಲಿ ಪ್ರಮಾಣ ವಚನ ಸ್ವೀಕಾರಕ್ಕೆ ಅವಕಾಶ ಇಲ್ಲ ಎನ್ನುವುದಾದರೆ ಪ್ರಜಾಪ್ರಭುತ್ವ ವ್ಯವಸ್ಥೆಗೂ ಅರ್ಥವೇ ಇಲ್ಲ. ಮರಾಠಿ ಮಾತನಾಡದವರ ಮೇಲೆ ಬಲಪ್ರಯೋಗ ಮಾಡಿ ಅವರ ಬಾಯಿ ಮುಚ್ಚಿಸುತ್ತೇವೆ ಎನ್ನುವ ಧೋರಣೆ ಪಾಳೇಗಾರಿಕೆ ಮನೋಧರ್ಮದ ಸಂಕೇತ. ಅದನ್ನು ಪ್ರತಿಯೊಬ್ಬರೂ ಖಂಡಿಸಬೇಕು.

ಮಹಾರಾಷ್ಟ್ರದಲ್ಲಿರುವವರು ಮರಾಠಿ ಕಲಿಯಬೇಕು. ಅದರಲ್ಲಿಯೇ ವ್ಯವಹರಿಸಬೇಕು ಎಂದು ಯಾರಾದರೂ ಒತ್ತಾಯಿಸಿದರೆ ಅದು ತಪ್ಪಲ್ಲ. ಆದರೆ ಮರಾಠಿಯನ್ನು ಪ್ರೀತಿಯಿಂದ ಕಲಿತು ಅದರಲ್ಲಿ ವ್ಯವಹರಿಸಲು ಸಾಧ್ಯವಾಗುವಂತಹ ವಾತಾವರಣ ಇರಬೇಕು. ಒತ್ತಾಯ ಅಥವಾ ಬೆದರಿಕೆಯಿಂದ ಮರಾಠಿ ಕಲಿಸಲಾಗದು ಎಂಬುದನ್ನು ಎಂಎನ್‌ಎಸ್ ಮತ್ತು ಶಿವಸೇನೆಗಳ ಮುಖಂಡರು ಅರ್ಥ ಮಾಡಿಕೊಳ್ಳಬೇಕು. ಇನ್ನು ಕೆಲ ಭಾಷಿಕರಿಗೆ ಉದ್ಯೋಗ ಮತ್ತಿತರ ಸೌಲಭ್ಯಗಳೆಲ್ಲ ಬೇಕು. ಆದರೆ ಆ ರಾಜ್ಯದ ಭಾಷೆ ಕಲಿಯಲು ಅವರು ತಯಾರಿಲ್ಲ. ಇಂತಹ ಮನೋಧರ್ಮದವರಿಂದ ಭಾಷಾ ವೈಷಮ್ಯ ಬೆಳೆಯಲು ಕಾರಣವಾಗುತ್ತಿದೆ. ನಾನಾ ಕಾರಣಗಳಿಗಾಗಿ ಬೇರೆ ರಾಜ್ಯಗಳಲ್ಲಿ ನೆಲೆಸುವ ಅನಿವಾರ್ಯತೆ ಇರುವವರು ಮೊದಲು ಆ ರಾಜ್ಯದ ಭಾಷೆಯನ್ನು ಕಲಿತು ಅದರಲ್ಲಿ ವ್ಯವಹರಿಸಲು ಮುಂದಾಗಬೇಕು. ಅದು ಸಾಧ್ಯವಾದರೆ ಭಾಷೆಯ ಕಾರಣಕ್ಕೆ ಸಂಘರ್ಷಗಳು ಆಗುವುದಿಲ್ಲ. ನಮ್ಮದು ಬಹು ಭಾಷೆಗಳ ದೇಶ. ಅದೇ ಭಾರತದ ಶಕ್ತಿ ಎಂಬುದನ್ನು ಪ್ರತಿಯೊಬ್ಬರೂ ಸದಾ ನೆನಪಿನಲ್ಲಿ ಇಟ್ಟುಕೊಳ್ಳಬೇಕು.

ಮಹಾರಾಷ್ಟ್ರ ದೇಶದ ಪ್ರಮುಖ ರಾಜ್ಯಗಳಲ್ಲೊಂದು. ಮುಂಬಯಿ ದೇಶದ ವಾಣಿಜ್ಯ ರಾಜಧಾನಿ ಎಂದೇ ಹೆಸರಾಗಿದೆ. ಮುಂಬಯಿ ಮಾತ್ರವಲ್ಲ ಚೆನ್ನೈ,ಬೆಂಗಳೂರು, ಹೈದರಾಬಾದ್, ಕೋಲ್ಕತ್ತಾ, ದೆಹಲಿ ಮತ್ತಿತರ ಮಹಾನಗರಗಳೂ ಅಷ್ಟೇ. ಇಡೀ ವಿಶ್ವವೇ ಒಂದು ಹಳ್ಳಿಯಂತಾಗಿರುವ ಪ್ರಸ್ತುತ ಸನ್ನಿವೇಶದಲ್ಲಿ ಎಂಎನ್‌ಎಸ್‌ನ ಮರಾಠಿ ಭಾಷಾ ದುರಭಿಮಾನಕ್ಕೆ ಅರ್ಥವಿಲ್ಲ. ಅದೇನೇ ಇರಲಿ, ಇಂತಹ ಪರಿಸರದಲ್ಲಿ ಜೀವನ ನಡೆಸಬೇಕಾದ ಅನ್ಯಭಾಷಿಕರು ಎಚ್ಚರ ವಹಿಸಬೇಕು. ಪ್ರತಿಯೊಬ್ಬ ವ್ಯಕ್ತಿಯೂ ಪರಿಸರದ ಭಾಷೆ ಕಲಿತು ಅದರಲ್ಲಿ ವ್ಯವಹರಿಸುವ ಜಾಣತನ ತೋರಬೇಕು. ಈ ಮಾತು ಎಲ್ಲಾ ರಾಜ್ಯಗಳಲ್ಲಿರುವ ಅನ್ಯಭಾಷಿಕರಿಗೂ ಅನ್ವಯಿಸುತ್ತದೆ.

ಭಾಷೆಯ ಕಾರಣಕ್ಕೆ ಜನರನ್ನು ದ್ವೇಷಿಸುವಂತಹ ಪರಿಸ್ಥಿತಿ ಕೆಲ ರಾಜ್ಯಗಳಲ್ಲಿ ನಿರ್ಮಾಣವಾಗಲು ಕೇಂದ್ರ ಸರ್ಕಾರದ ಧೋರಣೆಯೂ ಕಾರಣ. ಕೇಂದ್ರ ಸರ್ಕಾರಿ ಉದ್ಯೋಗಗಳಲ್ಲಿ ಉತ್ತರ ಭಾರತೀಯರಿಗೆ, ಅದರಲ್ಲೂ ವಿಶೇಷವಾಗಿ ಬಿಹಾರಿಗಳಿಗೆ ಸಿಂಹಪಾಲು ಸಿಗುತ್ತಿದೆ ಎಂಬ ಆರೋಪ ಇತ್ತೀಚೆಗೆ ಹೆಚ್ಚಾಗಿ ಕೇಳಿಬರುತ್ತಿದೆ. ಈ ಹಿನ್ನೆಲೆಯಲ್ಲಿಯೇ ರೈಲ್ವೆ ನೇಮಕಾತಿ ಪರೀಕ್ಷೆಗೆ ಬಂದ ಬಿಹಾರಿ ಯುವಕರ ಮೇಲೆ ಕೆಲ ರಾಜ್ಯಗಳಲ್ಲಿ ಹಲ್ಲೆ ನಡೆದಿದೆ. ಕೇಂದ್ರ ಸರ್ಕಾರ ಎಲ್ಲ ಭಾಷಿಕರಿಗೂ ಸಮಾನ ಅವಕಾಶ ನೀಡುವಂತಹ ಉದ್ಯೋಗ ನೀತಿ ಅನುಸರಿಸಿದರೆ ಭಾಷೆಯ ಕಾರಣಕ್ಕೆ ಜನರನ್ನು ದ್ವೇಷಿಸುವ ಪರಿಸ್ಥಿತಿಯನ್ನು ತಡೆಯಬಹುದು.

■ ಪಿ. ಕೆ. ಹರಿಯಬ್ಬೆ

ಇಡೀ ವಿಶ್ವವೇ ಒಂದು ಹಳ್ಳಿಯಂತಾಗಿರುವ ಪ್ರಸ್ತುತ ಸನ್ನಿವೇಶದಲ್ಲಿ ಎಂಎನ್‌ಎಸ್‌ನ ಮರಾಠಿ ಭಾಷಾ ದುರಭಿಮಾನಕ್ಕೆ ಅರ್ಥವಿಲ್ಲ. ಅದೇನೇ ಇರಲಿ, ಇಂತಹ ಪರಿಸರದಲ್ಲಿ ಜೀವನ ನಡೆಸಬೇಕಾದ ಅನ್ಯಭಾಷಿಕರು ಎಚ್ಚರ ವಹಿಸಬೇಕು. ಪ್ರತಿಯೊಬ್ಬ ವ್ಯಕ್ತಿಯೂ ಪರಿಸರದ ಭಾಷೆ ಕಲಿತು ಅದರಲ್ಲಿ ವ್ಯವಹರಿಸುವ ಜಾಣತನ ತೋರಬೇಕು. ಈ ಮಾತು ಎಲ್ಲಾ ರಾಜ್ಯಗಳಲ್ಲಿರುವ ಅನ್ಯಭಾಷಿಕರಿಗೂ ಅನ್ವಯಿಸುತ್ತದೆ.

